# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2148
2. ಸದಸ್ಯರ ಹೆಸರು : ಶ್ರೀ ಐವಾನ್ ಡಿ'ಸೋಜಾ,
3. ಉತ್ತರಿಸಬೇಕಾದ ದಿನಾಂಕ : 26.03.2026.
4. ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಮಂಜೂರಾದ ಹುದ್ದೆಗಳೆಷ್ಟು; ಭರ್ತಿ ಮಾಡಲಾದ ಹಾಗೂ ಖಾಲಿ; ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)</td><td>
<table>
<tr><th>ಕಚೇರಿ</th><th>ಮಂಜೂರಾದ ಹುದ್ದೆ</th><th>ಭರ್ತಿ ಹುದ್ದೆ</th><th>ಖಾಲಿ ಹುದ್ದೆ</th></tr>
<tr><td>ವಿಭಾಗ ಕಛೇರಿ ಮಂಗಳೂರು</td><td>18</td><td>11</td><td>07</td></tr>
<tr><td>ಉಪ ವಿಭಾಗ ಕಛೇರಿ ಮಂಗಳೂರು</td><td>12</td><td>7</td><td>05</td></tr>
<tr><td>ಉಪ ವಿಭಾಗ ಕಛೇರಿ ಉಡುಪಿ</td><td>16</td><td>12</td><td>04</td></tr>
<tr><td>ಉಪ ವಿಭಾಗ ಕಛೇರಿ ಮಡಿಕೇರಿ</td><td>15</td><td>6</td><td>09</td></tr>
<tr><td>ಒಟ್ಟು</td><td>61</td><td>36</td><td>25</td></tr>
</table>
</td></tr>
<tr><td>ಆ</td><td>ಹೆಚ್ಚಿನ ಹುದ್ದೆಗಳು ಖಾಲಿ ಇರುವುದರಿಂದ ಇಲಾಖೆಯ ಕೆಲಸವು ಮಂದಗತಿಯಿಂದ ನಡೆಯುತ್ತಿದೆ ಎಂಬ ದೂರುಗಳಿರುವುದು ನಿಜವೇ;</td><td>ಮಂಗಳೂರು ವಿಭಾಗ ಹಾಗೂ ಅಧೀನ ಕಚೇರಿಗಳಲ್ಲಿ ಮೇಲೆ ವಿವರಿಸಿರುವಂತೆ ಹುದ್ದೆಗಳು ಖಾಲಿ ಇರುವುದರಿಂದ ಕಛೇರಿಯ ದೈನಂದಿನ ಕೆಲಸಗಳನ್ನು ನಿಗಧಿತ ಸಮಯದಲ್ಲಿ ನಿರ್ವಹಿಸುವುದು ಕಷ್ಟ ಸಾಧ್ಯವಾಗಿರುತ್ತದೆ.</td></tr>
<tr><td>ಇ</td><td>ಶೀಘ್ರವಾಗಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮಕೈಗೊಳ್ಳುವುದೇ?</td><td>ಸಣ್ಣ ನೀರಾವರಿ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಹೊಸದಾಗಿ ರಚಿಸಲಾಗಿದ್ದು, ಸದರಿ ನಿಯಮದಲ್ಲಿನ ಅವಕಾಶದನ್ವಯ ಜಲಸಂಪನ್ಮೂಲ ಹಾಗೂ ಲೋಕೋಪಯೋಗಿ ಇಲಾಖೆಯ ಅಧಿಕಾರಿ ನೌಕರರಿಂದ ಒಂದು ಬಾರಿ ಅವಕಾಶದಂತೆ ಸಣ್ಣ ನೀರಾವರಿ ಇಲಾಖೆಯಲ್ಲಿ ವಿಲೀನಗೊಳ್ಳಲು ಅಭಿಮತ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಅದರಂತೆ ಅಭಿಮತ ಇಚ್ಛಾಪತ್ರ ಸಲ್ಲಿಸಿ ಇನ್ನುಳಿದ ಖಾಲಿ ಹುದ್ದೆಗಳನ್ನು ಭರ್ತಿಮಾಡಲು ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿದೆ.</td></tr>
</table>

ಕಡತ ಸಂಖ್ಯೆ: MID/36/LCQ/2026

(ಎನ್.ಎಸ್. ಬೋಸರಾಜು)
ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ
ಸಚಿವರು.